ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಹೌದು.

ಆ) ಹೌದು.

ಇ) ನಿವೇಶನದ ಸುತ್ತಲೂ ಆವರಣ ಗೋಡೆಯನ್ನು ನಿರ್ಮಾಣ ಮಾಡಲಾಗಿದೆ. ಕಟ್ಟಡ ನಿರ್ಮಾಣ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

94 (192) ಶ್ರೀ ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಎಲ್ಲೆಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಹಾಸ್ಟಲ್‌ಗಳಿವೆ ಸ್ವಂತ ಕಟ್ಟಡದಲ್ಲಿರುವ ಹಾಸ್ಟೆಲ್‌ಗಳು ಯಾವುವು ಹಾಗೂ ಬಾಡಿಗೆ ಕಟ್ಟಡದಲ್ಲಿರುವ ಹಾಸ್ಟೆಲ್‌ಗಳು ಯಾವುವು (ಮಹಿಳಾ ಹಾಗೂ ಪುರುಷರ ಬಾಲಕರ ಹಾಗೂ ಬಾಲಕಿಯರ ಹಾಸ್ಟಲ್‌ಗಳ ಸಂಖ್ಯೆ ಒದಗಿಸುವುದು) ;

ಆ) ಪ್ರತಿ ಹಾಸ್ಟಲ್‌ಗಳಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು ; ಹಾಗೂ ಯಾವ ತರಗತಿಯ ಎಷ್ಟೆಷ್ಟು ವಿದ್ಯಾರ್ಥಿಗಳಿದ್ದಾರೆ ;

ಇ) ಈ ಹಾಸ್ಟೆಲ್‌ಗಳಲ್ಲಿ ವಾಚನಾಲಯ ದಾಸ್ತಾನು ಕೊಠಡಿ, ಶೌಚಾಲಯ, ಸ್ನಾನದ ಕೊಠಡಿಗಳಿವೆಯೇ ; ವಿವರಗಳನ್ನು ಒದಗಿಸುವುದು ;

ಈ) ಈ ಹಾಸ್ಟೆಲ್‌ಗಳಲ್ಲಿನ ಆಹಾರ ಕ್ರಮವೇನು ;

ಉ) ಪೂರ್ಣ ಸಿಬ್ಬಂದಿಗಳ ವಿವರಗಳೇನು ;

ಊ) ಈ ಹಾಸ್ಟೆಲ್‌ಗಳಲ್ಲಿನ ಅವ್ಯವಸ್ಥೆ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆಯೇ ;

ಋ) ಬಂದಿದ್ದಲ್ಲಿ ಸದರಿ ಅವ್ಯವಸ್ಥೆ ದೂರುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) 1. ರಾಜ್ಯದಲ್ಲಿ 07 ಮೆಟ್ರಿಕ್ ನಂತರದ ಹಾಗೂ 16 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಸೇರಿದಂತೆ 23 ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳಿವೆ. ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

2. ಇವುಗಳಲ್ಲಿ ಧಾರವಾಡ, (ಮೆಟ್ರಿಕ್ ನಂತರದ ಬಾಲಕಿಯರು) ಬಿಜಾಪುರ (ಮೆಟ್ರಿಕ್ ಪೂರ್ವ ಬಾಲಕಿಯರು) ಹಾಗೂ ದಾವಣಗೆರೆ (ಮೆಟ್ರಿಕ್ ನಂತರದ ಬಾಲಕಿಯರ) ವಿದ್ಯಾರ್ಥಿ ನಿಲಯಗಳು ಮಾತ್ರ ಸ್ವಂತ ಕಟ್ಟಡದಲ್ಲಿವೆ. ಇತರ ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿವೆ.

ಆ) ಕೋರಿರುವ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಈ ಎಲ್ಲಾ ಸ್ವಂತ ಕಟ್ಟಡಗಳಲ್ಲಿ ದಾಸ್ತಾನು ಕೊಠಡಿ, ಶೌಚಾಲಯ, ಸ್ನಾನದ ಕೊಠಡಿಗಳು ಇರುತ್ತವೆ. ಆದರೆ ಬಾಡಿಗೆ ಕಟ್ಟಡದಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿ ಈ ಸೌಕರ್ಯಗಳು ಇದ್ದರೂ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿರುವುದಿಲ್ಲ.

ಈ) ಈ ವಿದ್ಯಾರ್ಥಿನಿಲಯಗಳಲ್ಲಿ ಬೆಳಗಿನ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿ ಊಟವನ್ನು ನಿಗಧಿಪಡಿಸಿದ ದರದ ಮಿತಿಯೊಳಗೆ ಒದಗಿಸಲಾಗುತ್ತಿದೆ. (ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ರೂ. 450/– ರಂತೆ ಮಾಸಿಕ ದರದಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ. 500/– ರಂತೆ ಮಾಸಿಕ ದರದಂತೆ).

ಉ) ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ 55 ಸಿಬ್ಬಂದಿ ಮಂಜೂರಾಗಿದು, ಇನ್ನೂ 11 ವಿದ್ಯಾರ್ಥಿ ನಿಲಯಗಳಿಗೆ 44 ಸಿಬ್ಬಂದಿ ಮಂಜೂರಾಗಬೇಕಾಗಿದೆ.

ಸಿಬ್ಬಂದಿ ವಿವರ:

50 ಸಂಖ್ಯಾಬಲದ 01 ವಿದ್ಯಾರ್ಥಿನಿಲಯಕ್ಕೆ ಒಬ್ಬರು ಮೇಲ್ವಿಚಾರಕರು/ ವಾರ್ಡನ್, ಇಬ್ಬರು ಅಡಿಗೆಯವರು, ಒಬ್ಬರು ಅಡಿಗೆ ಸಹಾಯಕರು ಇರುತ್ತಾರೆ. ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಇವರ ಜೊತೆಗೆ ಒಬ್ಬರು ರಾತ್ರಿ ಕಾವಲುಗಾರರು ಹಾಗೂ ಮೆಟ್ರಿಕ್ ನಂತರದ ನಿಲಯಕ್ಕೆ ಒಬ್ಬರು ಜವಾನರು ಇರುತ್ತಾರೆ.

ಊ) ಇಲ್ಲ.

ಋ) ಸಿಬ್ಬಂದಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಎಲ್ಲಾ ನಿಲಯಗಳಿಗೆ ಹಂತ ಹಂತವಾಗಿ ಸ್ವಂತ ಕಟ್ಟಡ ನಿರ್ಮಿಸಲು ಯೋಜಿಸಲಾಗಿದೆ.

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜನಗರ) ವಿಧಾನ ಸಭೆಯ ಸದಸ್ಯರು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ 192 ಕ್ಕೆ ಉತ್ತರಗಳು

1. ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳು:

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮಂಜೂರಾತಿ ಸಂಖ್ಯೆ	ಪ್ರವೇಶ ಪಡೆದ ವಿದ್ಯಾರ್ಥಿಗಳು					ಸ್ವಂತ/ಬಾಡಿಗೆ ಕಟ್ಟಡ
			ಸಂಖ್ಯೆ	ಮುಸ್ಲಿಂ	ಕ್ರಿಶ್ಚಿಯನ್	ಜೈನ್	ಇತರರು	
1.	ಬೆಂಗಳೂರು ನಗರ	50	50	32	5	–	13	ಬಾಡಿಗೆ
2.	ಮೈಸೂರು	50	48	27	2	–	19	ಬಾಡಿಗೆ
3.	ದಕ್ಷಿಣ ಕನ್ನಡ	50	50	11	24	–	15	ಬಾಡಿಗೆ
4.	ಧಾರವಾಡ	50	50	37	0	1	12	ಸ್ವಂತ
5.	ಗುಲ್ಬರ್ಗಾ	50	50	38	0	–	12	ಬಾಡಿಗೆ
6.	ದಾವಣಗೆರೆ	50	50	38	0	–	12	ಸ್ವಂತ
7.	ರಾಯಚೂರು	50	50	27	11	–	12	ಉಚಿತ
	ಒಟ್ಟು	350	348	210	42	1	95	

II. ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಗಳು:

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮಂಜೂರಾತಿ ಸಂಖ್ಯೆ	ಪ್ರವೇಶ ಪಡೆದ ವಿದ್ಯಾರ್ಥಿಗಳು					ಸ್ವಂತ/ಬಾಡಿಗೆ ಕಟ್ಟಡ
			ಸಂಖ್ಯೆ	ಮುಸ್ಲಿಂ	ಕ್ರಿಶ್ಚಿಯನ್	ಜೈನ್	ಇತರರು	
1.	ಬೆಂಗಳೂರು ನಗರ	50	–	–	–	–	–	
2.	ರಾಯಚೂರು	50	50	31	7	–	12	ಬಾಡಿಗೆ
3.	ಬೀದರ್	50	50	32	4	–	14	ಬಾಡಿಗೆ
4.	ಬಾಗಲಕೊಟೆ–ಇಲಕಲ್	50	44	30	–	–	14	ಬಾಡಿಗೆ
5.	ಗುಲ್ಬರ್ಗಾ	50	50	37	–	–	13	ಬಾಡಿಗೆ
6.	ದಕ್ಷಿಣ ಕನ್ನಡ, ಗುರುಕುಂಬಳ	50	40	21	1	–	18	ಬಾಡಿಗೆ
7.	ಮೈಸೂರು	50	22	22	–	–	–	ಬಾಡಿಗೆ
8.	ಬಿಜಾಪುರ	50	50	37	–	–	13	ಸ್ವಂತ
	ಒಟ್ಟು	400	306	210	12	0	84	

III. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳು:

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮಂಜೂರಾತಿ ಸಂಖ್ಯೆ	ಪ್ರವೇಶ ಪಡೆದ ವಿದ್ಯಾರ್ಥಿಗಳು					ಸ್ವಂತ/ಬಾಡಿಗೆ ಕಟ್ಟಡ
			ಸಂಖ್ಯೆ	ಮುಸ್ಲಿಂ	ಕ್ರಿಶ್ಚಿಯನ್	ಜೈನ್	ಇತರರು	
1.	ಕೊಪ್ಪಳ	50	50	28	–	–	22	ಬಾಡಿಗೆ
2.	ಬೀದರ್	50	50	16	18	–	16	ಬಾಡಿಗೆ
3.	ಬಾಗಲಕೋಟೆ	50	46	24	–	–	22	ಬಾಡಿಗೆ
4.	ಗುಲ್ಬರ್ಗಾ–ಜೇವರ್ಗಿ	50	50	33	–	–	17	ಬಾಡಿಗೆ
5.	ಬಳ್ಳಾರಿ	50	50	35	–	–	15	ಬಾಡಿಗೆ
6.	ಬಿಜಾಪುರ	50	50	37	–	–	13	ಬಾಡಿಗೆ
7.	ಬಿಜಾಪುರ–ಮುದ್ದೇಬಿಹಾಳ	50	50	37	–	–	13	ಬಾಡಿಗೆ
8.	ಬಿಜಾಪುರ–ನಿಡಗುಂದಿ	50	50	37	–	–	13	ಬಾಡಿಗೆ
	ಒಟ್ಟು	400	396	247	18	0	131	ಬಾಡಿಗೆ
	ಮೆ.ನಂ.&ಮೆ.ಪೊ. ಒಟ್ಟು	1150	1050	667	72	1	310	